**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 27/2022**

**ಪಿ ಡಬ್ಲ್ಯೂಃ1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 20.01.2025**

**ಮುಂ. ಪಾಟೀ ಸವಾಲುಃ ಶ್ರೀ ಎಮ್ ಎಮ್ ಜಿ ವಕೀಲರಿಂದ ಪ್ರತಿವಾದಿ ಪರ ವಕೀಲರುಃ**

5. ನಾನು ಈ ಹಿಂದೆ ನನ್ನ ಪಾಟೀ ಸವಾಲಿನಲ್ಲಿ ಓ ಎಸ್ ನಂಃ34/2002 ಮತ್ತು ಆರ್ ಎ ನಂಃ54/2016 ರ ದಾಖಲೆಗಳನ್ನು ಹಾಜರಪಡಿಸುವುದಾಗಿ ತಿಳಿಸಿದ್ದು, ಸಾಕ್ಷಿ ಈಗ ಈ ಹಿಂದೆ ಅದು 16 ನೇ ತಾರೀಖು ಜನವರಿ 2025 ರಂದು ಇತ್ತು ಈಗ ಅದು ದಿಃ18.01.2025 ಕ್ಕೆ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಆರ್ ಎ ನಂಃ54/2016 ರ ನಾನೇ ಮಾಡಿದ್ದು ಅದು ದಿಃ23.09.2017 ರಂದು ವಜಾ ಆಗಿರುತ್ತದೆ ಎಂದರೆ ಸಾಕ್ಷಿ ವಜಾ ಆಗಿದೆ, ಆದರೆ ಅದು

ಮೇಲ್ಮನವಿ ಪ್ರಕಾರ ಮತ್ತೆ ಮೇಲಿನ ನ್ಯಾಯಾಲಯಕ್ಕೆ ಬಂದಿದೆ ಎಂದು ನುಡಿಯುತ್ತಾರೆ. ಈ ರೀತಿ ವಾಪಾಸ್ಸು ಬಂದ ಮೇಲ್ಮನವಿ ನಂಬರ ಮತ್ತು ಅದು ಯಾಕೆ ವಾಪಾಸ್ಸು ಬಂದಿದ್ದು ಅಂತ ಹೇಳಲಾಗುತ್ತಾ ಎಂದರೆ ಸಾಕ್ಷಿ ನನಗೆ ಅಷ್ಟಾಗಿ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

6. ಆರ್ ಎ ನಂಃ54/2016 ರ ವಜಾ ಆದ ನಂತರ ನಾನಾಗಲೀ ಬೇರೆ ಪಕ್ಷಗಾರರಾಗಲೀ ಅದನ್ನು ಮೇಲ್ಮನವಿ ಮುಖಾಂತರ ಪ್ರಶ್ನಿಸಿರುವುದಿಲ್ಲ, ಮೇಲ್ಮನವಿ ಮಾಡಿ ಪ್ರಶ್ನಿಸಿದ್ದೇವೆ ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಾವು ಮೇಲ್ಮನವಿ ಸಲ್ಲಿಸದ ಕಾರಣ ಓ ಎಸ್ ನಂಃ34/2002 ರ ಆದೇಶ ಮತ್ತು ಡಿಕ್ರಿ ಅನುಗುಣವಾಗಿ ಆ ದಾವೆಯ ವಾದಿ ಎಫ್ ಡಿ ಪಿ ಪ್ರಕರಣವನ್ನು ದಾಖಲಿಸಿ ದಿಃ07.07.2019 ರಂದು ಇತ್ಯರ್ಥಗೊಂಡಿರುತ್ತದೆ ಎಂದರೆ ಸಾಕ್ಷಿ ಪೋಡಿ ಆಗಿಲ್ಲ ಮತ್ತು ಅವರು ಕಬ್ಜೆ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಎಫ್ ಡಿ ಪಿ ದಿಃ07.07.2019 ರಂದು ನಿಕಾಲೆಯಾದ ನಂತರ ಅರ್ಜಿದಾರರ ಇವರು ಎಕ್ಸಿಕ್ಯೂಷನ್ ಪೆಟಿಷನ್ ನಂಃ2/2024 ರಂತೆ ಅಮಲ್ಜಾರಿ ಪ್ರಕ್ರಿಯೆ ಕೈಗೊಂಡಿರುತ್ತಾರೆ ಎಂದರೆ ಸಾಕ್ಷಿ ಕಬ್ಜಾ ಪಡೆಯುವ ಸಮಯದಲ್ಲಿ ನಾವು ತಕರಾರು ಮಾಡಿದ್ದಕ್ಕೆ ಅದು ಮೇಲಿನ ನ್ಯಾಯಾಲಯಕ್ಕೆ ಮತ್ತೆ ವಾಪಾಸ್ಸು ಬಂದಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಇಂದಿನವರೆಗೂ ಎಲ್ಲಾ ಆಸ್ತಿ ಜಂಟಿ ಆಗಿ ಇದೆ ಎಂದು ನುಡಿಯುತ್ತಾರೆ.

7. ಈ ನ್ಯಾಯಾಲಯದ ಆದೇಶದ ಪ್ರಕಾರ ನ್ಯಾಯಾಲಯದ ಬೇಲಿಫ ಇವರು ಆದೇಶವನ್ನು ಜಾರಿ ಮಾಡಿ ವರದಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಮೇಲಿನ ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ವರದಿಯನ್ನು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ ಹಾಗೂ ಅವರು ಸಲ್ಲಿಸಿದ ವರದಿ ಪ್ರಕಾರ ದರ್ಖಾಸ್ತು ಅರ್ಜಿಯು ದಿಃ08.11.2024 ರಂದು ಇದೇ ನ್ಯಾಯಾಲಯದಲ್ಲಿ ಮುಕ್ತಾಯಗೊಂಡಿರುತ್ತದೆ ಎಂದರೆ ಸಾಕ್ಷಿ ಮುಕ್ತಾಯ ಆಗಿದೆ ಎಂದು ನುಡಿಯುತ್ತಾರೆ.

8. ಪೀರಪಾಶಾ ಮೆಹಬೂಬಪೀರ ದರ್ಗಾ ನನ್ನ ಮಗ. ನನ್ನ ಮಗ ಪೀರಪಾಶಾ ಇವರು ಅವರ ಕುಟುಂಬದ ಎಲ್ಲಾ ಜಮೀನುಗಳು, ಮನೆ ಹಾಗೂ ಹಿತ್ತಲಿಗೆ ಸಂಬಂದಪಟ್ಟ ಹಾಗೇ ದಾದಾಪೀರ ಇವರು ತನ್ನ ಪರವಾಗಿ ಒಂದು ಮೃತ್ಯು ಪತ್ರವನ್ನು ಮಾಡಿರುವ ಬಗ್ಗೆ ಓ ಎಸ್ ನಂಃ41/2018 ರಲ್ಲಿ ದಾವೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಹೌದು ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಓ ಎಸ್ ನಂಃ41/2018 ರಲ್ಲಿ ಈ ದಾವೆಯಲ್ಲಿ ಹೇಳಿದ ದಾವಾ ಆಸ್ತಿ ಸಹ ಒಂದು ದಾವಾದ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಓ ಎಸ್

ನಂಃ41/2018 ಈಗ ನನ್ನ ಮಗನ ಸಾಕ್ಷಿ ವಿಚಾರಣೆಗೆ ಅಂತ ಇದೆ ಎಂದರೆ ಸರಿ.

9. ಈ ದಾವೆಯ ದಾವಾ ಆಸ್ತಿ ವಿಪಿಸಿ ನಂಃ999 ಆಗಿರುತ್ತದೆ. ದಾವಾ ಆಸ್ತಿ ವಿಪಿಸಿ ನಂಃ16/1 ಎಂದರೆ ಸರಿ. ವಿಪಿಸಿ ನಂಃ16/1 ಏನು ಒಳಗೊಂಡಿದೆ ಎಂದರೆ ಸಾಕ್ಷಿ ಖುಲ್ಲಾ ಜಾಗ ಮಾತ್ರ ಎಂದು ನುಡಿಯುತ್ತಾರೆ. ವಿಪಿಸಿ ನಂಃ16/1 ರ ಯಾವುದಾದರು ದಿಕ್ಕಿನ ಕಡೆಗೆ ವಿಪಿಸಿ 336/ಎ ಬರುತ್ತದೆ ಎಂದರೆ ಸಾಕ್ಷಿ ನಡುವೆ ಬರುತ್ತದೆ ಎಂದು ನುಡಿಯುತ್ತಾರೆ. ವಿಪಿಸಿ ನಂಃ336/ಎ ವಿಪಿಸಿ ನಂಃ16/1 ರ ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ದಕ್ಷಿಣಕ್ಕೆ ದಾರಿ ಮತ್ತು ನಮ್ಮ ಮನೆ ಆಸ್ತಿ ಹಾಗೂ ಶೆಡ್ಡು ಇದೆ ಎಂದು ನುಡಿಯುತ್ತಾರೆ.

10. ವಿಪಿಸಿ ನಂಃ337 ರ ಆಸ್ತಿ ಅಂತ ನಾವು ಹೇಳಿದ್ದು, ಅದರ ಚಕ್ಕುಬಂದಿ ಹೇಳಲಾಗುತ್ತಾ ಎಂದರೆ ಸಾಕ್ಷಿ ಪೂರ್ವಕ್ಕೆ ಪ್ಲಾಟನ ದಾರಿ, ಪಶ್ಚಿಮಕ್ಕೆ ನಮ್ಮದೇ ಆಸ್ತಿ, ಉತ್ತರಕ್ಕೆ ಪ್ಲಾಟ ಇದ್ದು, ಅದರ ನಂಬರ ನೆನಪು ಇರುವುದಿಲ್ಲ ಹಾಗೂ ದಕ್ಷಿಣಕ್ಕೆ ಇದೇ 337 ರ ಮನೆ ಮತ್ತು ದಾರಿ ಇದೆ ಎಂದು ನುಡಿಯುತ್ತಾರೆ. ವಿಪಿಸಿ ನಂಃ337 ರ ಪೂರ್ವಕ್ಕೆ ದಾರಿ ಮತ್ತು ಮಹ್ಮದಾಸಬ ಮೌಲಾಸಾಬ ನದಾಫ ಇವರ ಮನೆ ಇದೆ ಎಂದರೆ ಸಾಕ್ಷಿ ಇದೆ, ಆದರೆ ಅದು ದಾರಿ ದಾಟಿ ಇದೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ 338 ರ ಮನೆ ಇದೆ ಎಂದರೆ ಸಾಕ್ಷಿ ಮನೆ ಇಲ್ಲ, ಅಲ್ಲಿ ನಮಗೆ ಸೇರಿದ ಖುಲ್ಲಾ ಜಾಗೆ ಇದೆ ಎಂದು ನುಡಿಯುತ್ತಾರೆ. ಉತ್ತರಕ್ಕೆ ವಿಪಿಸಿ ನಂಃ336/ಎ ಅಲ್ಲಾಭಕ್ಷ ನದಾಫ ಮತ್ತು ಮಹಬೂಬುಸಾಬ ನದಾಫ 1 ನೇ ಪ್ರತಿವಾದಿ ಇವರಿಗೆ ಸೇರಿದ ಮನೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಲ್ಲಿ ನಮ್ಮದೇ ಖುಲ್ಲಾ ಜಾಗೆ ಇದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ಸರಕಾರಿ ರಸ್ತೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರ ಬಾಜುಕ್ಕೆ ನಮ್ಮ ಮನೆ ಇದೆ ಎಂದು ನುಡಿಯುತ್ತಾರೆ.

11. ನಾನು ವಿಪಿಸಿ ನಂಃ337 ರ ಉತ್ತರಕ್ಕೆ ನಮ್ಮದೇ ಜಾಗೆ ಇದೆ ಅಂತ ಹೇಳಿದ್ದು ಅದರ ನಂಬರ ನೆನೆಪು ಇರುವುದಿಲ್ಲ. ವಿಪಿಸಿ ನಂಃ337 ರ ಉತ್ತರದ ಕಡೆಗೆ 1 ನೇ ಪ್ರತಿವಾದಿ ಮತ್ತು ಅಲ್ಲಾಭಕ್ಷ ನದಾಫ ಇವರಿಗೆ ಸೇರಿದ ವಿಪಿಸಿ ನಂಃ336/ಎ ಆಸ್ತಿ ಇದೆ ಎಂದರೆ ಸರಿಯಲ್ಲ.

12. 1 ನೇ ಪ್ರತಿವಾದಿ ಇವರ ತಂದೆ ಹೆಸರು ನಬೀಸಾಬ ಆಗಿರುತ್ತದೆ. ನಬೀಸಾಬ ಇವರ ತಂದೆ ಹೆಸರು ಹುಸೇನಸಾಬ. ಹುಸೇನಸಾಬ ಇವರಿಗೆ ಇಬ್ಬರು ಮಕ್ಕಳು ನಬೀಸಾಬ ಮತ್ತು ಅಲ್ಲಾಭಕ್ಷ ಆಗಿರುತ್ತದೆ. ಹುಸೇನಸಾಬ ಇವರು ತೀರಿಕೊಂಡಿರುತ್ತಾರೆ. ಅವರ ನಬೀಸಾಬ ಸಹ ತೀರಿಕೊಂಡಿರುತ್ತಾರೆ. ನಬೀಸಾಬ ಇವರ ಮಗ 1 ನೇ ಪ್ರತಿವಾದಿ ಎಂದರೆ ಸರಿ.

13. ದಾವಾ ಆಸ್ತಿ 16/1 ಮತ್ತು 16/2 ಅಂತ ವಿಭಾಗ ಏನಾದರು ಆಗಿದಿಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ದಾವಾದ ಆಸ್ತಿಗೆ ತೋರಿಸಿದ ಚಕ್ಕುಬಂದಿಯಲ್ಲಿ ದಾವಾ ಆಸ್ತಿಯ ಯಾವ ಕಡೆಗೂ 16/2 ಅಂತ ತೋರಿಸಿರುವುದಿಲ್ಲ. ವಿಪಿಸಿ ನಂ:16/1 ಹಾಗೂ 16/2 ಅಂತ ಆಸ್ತಿಗಳು ಇವೆ ಎಂದರೆ ಸರಿ. ವಿಪಿಸಿ ನಂ:16/1 ರ ಆಸ್ತಿಗೆ ಪರಾಧೀನ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

14. ನಿಂಗಪ್ಪ ಯಲ್ಲಪ್ಪ ಹಾದಿಮನಿ ಇವರು ಯಾರು ಎಂದರೆ ಸಾಕ್ಷಿ ಅವರು ನಮ್ಮ ಆಸ್ತಿಯ ಉತ್ತರ ದಿಕ್ಕಿಗೆ ಇದ್ದಾರೆ ಎಂದು ನುಡಿಯುತ್ತಾರೆ. ಮೋದಿನಸಾಬ ಬಾಬಾಜಾಜನ ದರ್ಗಾ ಅಂದರೆ ಯಾರು? ಸಾಕ್ಷಿ ಮೋದಿನಸಾಬ ನನ್ನ ತಂದೆ, ಬಾಬಾಜಾನ ನನ್ನ ಅಜ್ಜ ಎಂದು ನುಡಿಯುತ್ತಾರೆ. ವಲೀಪಾಷಾ ನನ್ನ ಹಿರೇ ಅಣ್ಣ, ದಾದಾಪೀರ ಇವರು ನನ್ನ ಎರಡನೇ ಅಣ್ಣ, ತಾಜುದ್ದೀನ ನನ್ನ ಮೂರನೇ ಅಣ್ಣ, ಮಹಾಬೂಬುಪೀರಾ ನಾನೇ ಹಾಗೂ ಬಾಬಾಜಾನ ನನ್ನ ತಮ್ಮ. ನಾವು ಇಲ್ಲರೂ ಸೇರಿಕೊಂಡು ದಿ:23.04.1968 ರಲ್ಲಿ ವಿಪಿಸಿ ನಂ:16/2 ರ ಪೂರ್ವದಲ್ಲಿರುವ ಆಸ್ತಿಯನ್ನು ನಿಂಗಪ್ಪ ಯಲ್ಲಪ್ಪ ಹಾದಿಮನಿ ಇವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಸಾಕ್ಷಿ ಸದರಿ ಕ್ರಯ ಪತ್ರವನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ:1 ಎಂದು ಗುರುತಿಸಲಾಯಿತು.

15. ವಿಪಿಸಿ ನಂ:16/2 ರ ಪೈಕಿ ಪೂರ್ವ ಭಾಗದ ಆಸ್ತಿಯನ್ನು ಖರೀದಿಗೆ ಕೊಟ್ಟಿದ್ದು, ಅದರ ಚಕ್ಕುಬಂದಿ ಹೇಳಲಾಗುತ್ತಾ ಎಂದರೆ ಸಾಕ್ಷಿ ಪೂರ್ವಕ್ಕೆ ಮಹ್ಮದಸಾಬ ನದಾಫ ಇವರ ಹಿತ್ತಲ, ಪಶ್ಚಿಮಕ್ಕೆ ಕಡಪಟ್ಟಿ ಇವರ ಖುಲ್ಲಾ ಜಾಗ, ಉತ್ತರಕ್ಕೆ ಹಾದಿಮನಿ ಇವರ ಮನೆ ಮತ್ತು ಹಿತ್ತಲು ಹಾಗೂ ದಕ್ಷಿಣಕ್ಕೆ ನಮ್ಮದೇ ಆಸ್ತಿ ಇದೆ ಎಂದು ನುಡಿಯುತ್ತಾರೆ. ಈ ರೀತಿ ಚಕ್ಕುಬಂದಿ ಇದೆ ಅಂತ ನಾನು ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

16. ವಿಪಿಸಿ ನಂ:16/2 ರ ಪೂರ್ವಕ್ಕೆ ಮಹ್ಮದಸಾಬ ಮೌಲಾಸಾಬ ನದಾಫ ಇವರ ಆಸ್ತಿ ಎಂದರೆ ಸಾಕ್ಷಿ ಹಿತ್ತಲು ಇದೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಖರೀದಿ ಕೊಟ್ಟ ಪೈಕಿ ಉಳಿದ ಜಾಗೆ ಇದೆ ಎಂದರೆ ಸಾಕ್ಷಿ ಕಡಪಟ್ಟಿ ಇವರ ಆಸ್ತಿ ಎಂದು ನುಡಿಯುತ್ತಾರೆ. ಉತ್ತರಕ್ಕೆ ದೂಳಪ್ಪ ಫಕ್ಕೀರಪ್ಪ ಹಾದಿಮನಿ ಇವರ ಆಸ್ತಿ ಎಂದರೆ ಸರಿ. ದಕ್ಷಿಣಕ್ಕೆ ಸರಕಾರಿ ಬೋಳ ಅದರ ಆಚೆ ಹುಸೇನಸಾಬ ನದಾಫ ಇವರ ಆಸ್ತಿ ಇದೆ ಎಂದರೆ ಸಾಕ್ಷಿ ಬೋಳ/ದಾರಿ ಇಲ್ಲ, ಖುಲ್ಲಾ ಜಾಗೆ ಇದೆ ಎಂದು ನುಡಿಯುತ್ತಾರೆ. ಅಲ್ಲಿ ಬೋಳ ಇದ್ದು ಅದನ್ನು ನಾವೇ ಅತೀಕ್ರಮಣ ಮಾಡಿದ್ದೇವೆ ಎಂದರೆ ಸರಿಯಲ್ಲ. ಹುಸೇನಸಾಬ ನದಾಫ ಇವರು 1 ನೇ ಪ್ರತಿವಾದಿಯ ಅಜ್ಜ ಎಂದರೆ ಸರಿ.

1 ನೇ ಪ್ರತಿವಾದಿ ಇವರು ನಮ್ಮ ಊರಿನಲ್ಲಿಯೇ ವಾಸವಾಗಿದ್ದಾರೆ ಎಂದರೆ ಸರಿ. ಅದಲ್ಲದೇ 1 ನೇ ಪ್ರತಿವಾದಿಯ ಮತ್ತು ಅವರ ಅಜ್ಜ ಸಹ ನಮ್ಮ ಊರಿನಲ್ಲಿ ವಾಸವಾಗಿದ್ದರು ಎಂದರೆ ಸರಿ.

17. 1 ನೇ ಪ್ರತಿವಾದಿ ಇವರ ಅಜ್ಜ ಹುಸೇನಸಾಬ ಇವರಿಗೆ ಬೆಟ್ಟದೂರು ಗ್ರಾಮದಲ್ಲಿ ಒಂದು ಮನೆ ಮತ್ತು ಹಿತ್ತಲು ಇತ್ತು ಎಂದರೆ ಸಾಕ್ಷಿ ಇತ್ತು ಆದರೆ ನಮ್ಮ ಪ್ಲಾಟಿನ ಕಡೆಗೆ ಇಲ್ಲ ಎಂದು ನುಡಿಯುತ್ತಾರೆ. ಅವರ ಆಸ್ತಿ ಬೋಳದ ಕಡೆಗೆ ಇದೆ ಅಂತ ಹೇಳಿದ್ದು ಅದರ ನಂಬರ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಇವರ ಅಜ್ಜ ಇವರಿಗೆ ಸೇರಿದ ಮನೆ ನಂಃವಿಪಿಸಿ ನಂಃ336/ಎ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಈ ದಾವೆಯಲ್ಲಿ ವಿಪಿಸಿ ನಂಃ336/ಎ ಉತಾರವನ್ನು ಹಾಜರುಪಡಿಸಿದ್ದಾನೆ ಅದನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿಲ್ಲ ಎಂದು ನುಡಿಯುತ್ತಾರೆ. ವಿಪಿಸಿ ನಂಃ336/ಎ 1 ನೇ ಪ್ರತಿವಾದಿ ಇವರ ಅಜ್ಜನಿಗೆ ಸಂಬಂದಪಟ್ಟಿದ್ದು ಅವರು ತೀರಿಕೊಂಡ ನಂತರ ಅದು 1 ನೇ ಪ್ರತಿವಾದಿ ಮತ್ತು ಅವರ ಇನ್ನೊಬ್ಬ ಮಗ ಅಲ್ಲಾಭಕ್ಷಗೆ ಸಂಬಂದಪಟ್ಟಿದ್ದು ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಅವರ ಕಾಕಾ ಅಲ್ಲಾಭಕ್ಷ ಇವರು ವಿಪಿಸಿ ನಂಃ336/ಎ ಉತ್ತರ ದಕ್ಷಿಣ ಮುಖವಾಗಿ ಅರ್ಧ ಅರ್ಧ ರೀತಿಯಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ.

18. ವಿಪಿಸಿ ನಂಃ336/ಎ ರ ಉತ್ತರ ದಿಕ್ಕಿನ ಕಡೆಯ ಅರ್ಧ ಭಾಗ 1 ನೇ ಪ್ರತಿವಾದಿಗೆ ಹಾಗೂ ದಕ್ಷಿಣಯ ಕಡೆಗೆ ಅರ್ಧ ಭಾಗ ಅಲ್ಲಾಭಕ್ಷ ಇವರಿಗೆ ಬಂದಿದೆ ಎಂದರೆ ಸಾಕ್ಷಿ ಅವರು ಅದರಲ್ಲಿಯೇ ಎರಡು ಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಹಿಸ್ಸೆಗೆ ಬಂದ ವಿಪಿಸಿ ನಂಃ336/ಎ ಮೊದಲು ಮನೆ ಇತ್ತು ಎಂದರೆ ಸಾಕ್ಷಿ ಹಳೆ ಮನೆ ಇತ್ತು ಎಂದು ನುಡಿಯುತ್ತಾರೆ. ಸದರಿ ಮನೆಯ ಉತ್ತರ ಭಾಗದ ಗೋಡೆ ನೀರು ಬಿದ್ದು ಶೀತಲಗೊಂಡಿತ್ತು ಎಂದರೆ ಸಾಕ್ಷಿ ಹಳೆದು ಇತ್ತು, ಅದನ್ನು ಮತ್ತೆ ರೀಪೇರಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಈ ಗೋಡೆಯನ್ನು ಈ ರೀತಿ ಅವರು ಗ್ರಾಮ ಪಂಚಾಯಿತಿಯಿಂದ ಅನುದಾನ ಪಡೆದು ರಿಪೇರಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ರೀಪೇರಿ ಮಾಡಿಕೊಂಡಿದ್ದಾರೆ ಆದರೆ ಯಾರಿಂದ ಅನುದಾನ ಪಡೆದು ಗೊತ್ತಿಲ್ಲ ಅಂತ ನುಡಿಯುತ್ತಾರೆ. ಆ ಮನೆಯಲ್ಲಿ 1 ನೇಪ್ರತಿವಾದಿ ಅವರ ಹೆಂಡತಿ ಮಕ್ಕಳು ಕೂಡಿಯೇ ವಾಸವಾಗಿದ್ದರಾ ಎಂದರೆ ಸಾಕ್ಷಿ ವಾಸವಾಗಿದ್ದಾರೆ, ಆದರೆ ಅಲ್ಲಾಭಕ್ಷ ಎಲ್ಲೂ ಹೋಗಿದ್ದಾರೆ ಎಂದು ನುಡಿಯುತ್ತಾರೆ. ವಿಪಿಸಿ ನಂಃ336/ಎ ಮೇಲೆ ನಮಗೆ ಹಕ್ಕು ಹಿತಾಸಕ್ತಿ ವೆಗೈರೆ ಮತ್ತು ತಂಟೆ ಸಹ ಇರುವುದಿಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**